# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 336

ಸದಸ್ಯರ ಹೆಸರು : ಶ್ರೀ ಎಂ. ನಾಗರಾಜು

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 10.12.2025

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿ ಸಾರಿಗೆ ಸೇವೆಗಳ ಬಲವರ್ಧನೆಗಾಗಿ ಸರ್ಕಾರ ಕೈಗೊಂಡಿರುವ ಯೋಜನೆಗಳು ಯಾವುವು;</td><td>ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಸಾರಿಗೆ ಸೇವೆಗಳ ಬಲವರ್ಧನೆಗಾಗಿ ಸರ್ಕಾರ ಕೈಗೊಂಡಿರುವ ಯೋಜನೆಗಳನ್ನು ಅನುಬಂಧ ದಲ್ಲಿ ನೀಡಲಾಗಿದೆ.</td></tr>
<tr><td>ಆ.</td><td>ಗ್ರಾಮಾಂತರ ಮತ್ತು ಆರೇ ನಗರ ಪ್ರದೇಶಗಳಲ್ಲಿ ಬಸ್‌ಗಳ ಪ್ರಮಾಣ ಕಡಿಮೆ ಇದ್ದು, 2024-25 ಮತ್ತು 2025-26ನೇ ಸಾಲಿನ ಗ್ರಾಮಾಂತರ ಸಾರಿಗೆಗಾಗಿ ಇಲಾಖೆಯಿಂದ ಮಾಡಿರುವ ಸಾರಿಗೆ ವ್ಯವಸ್ಥೆ ಏನು; (ಮಾಹಿತಿ ನೀಡುವುದು)</td><td><u>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ</u><br>ನಿಗಮದ ವ್ಯಾಪ್ತಿಯಲ್ಲಿ 17 ಜಿಲ್ಲೆಗಳು ಬರುತ್ತವೆ. ಸದರಿ ಕಾರ್ಯಾಚರಣೆ ವ್ಯಾಪ್ತಿಯಲ್ಲಿ ಒಟ್ಟು 8252 ಅನುಸೂಚಿಗಳಿಂದ 52317 ಸುತ್ತುವಳಿಗಳ ಕಾರ್ಯಾಚರಣೆಯನ್ನು ಮಾಡಲಾಗುತ್ತಿದೆ. ನಿಗಮದ ವ್ಯಾಪ್ತಿಯಲ್ಲಿ ಒಟ್ಟು 21748 ಗ್ರಾಮಗಳಿದ್ದು, ಇದರಲ್ಲಿ 20090 ಗ್ರಾಮಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಲಾಗಿರುತ್ತದೆ. ಸಾರಿಗೆ ಸೌಲಭ್ಯ ಒದಗಿಸದೇ ಇರುವ ಗ್ರಾಮಗಳ ಪೈಕಿ 234 ಗ್ರಾಮಗಳಿಗೆ ಭಾರಿ ವಾಹನ ಸಂಚಾರಕ್ಕೆ ಸೂಕ್ತ ರಸ್ತೆ ಇರುವುದಿಲ್ಲ. ಉಳಿದಂತೆ, ಬಹುತೇಕ ಗ್ರಾಮಗಳಿಗೆ ಖಾಸಗಿ ಪ್ರವರ್ತಕರು ಸಾರಿಗೆ ಸೌಲಭ್ಯವನ್ನು ಕಲ್ಪಿಸುತ್ತಿರುತ್ತಾರೆ. 1658 ಗ್ರಾಮಗಳಿಗೆ 2 ಕಿ.ಮೀ. ಸಮೀಪದೊಳಗಿನ ರಸ್ತೆಯವರೆಗೆ ಸಾರಿಗೆ ಸೌಲಭ್ಯವನ್ನು ಒದಗಿಸಲಾಗಿರುತ್ತದೆ.<br><br>ಮುಂದುವರೆದು, ಸಾರಿಗೆ ಸೌಲಭ್ಯವಿಲ್ಲದ ಗ್ರಾಮಗಳಿಗೆ ಬೇಡಿಕೆಗೆ ಅನುಗುಣವಾಗಿ ಸದರಿ ಗ್ರಾಮಗಳಿಗೆ ಹಂತ-ಹಂತವಾಗಿ ಮೂಲಭೂತ ಸೌಕರ್ಯಗಳನ್ನು ಕ್ರೋಢೀಕರಿಸಿಕೊಂಡು ಮಾರ್ಗ ಸಮೀಕ್ಷೆ ಕೈಗೊಂಡು ಪರಿಶೀಲಿಸಿ ಸಾರಿಗೆ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>2024-25 ಮತ್ತು 2025-26ನೇ ಸಾಲಿನ ಗ್ರಾಮಾಂತರ ಪ್ರದೇಶಗಳ ಸಾರ್ವಜನಿಕರಿಗೆ ಸಾರಿಗೆ ಸೌಲಭ್ಯ ಕಲ್ಪಿಸುವ ಗ್ರಾಮಾಂತರ ಸಾರಿಗೆ, ವೇಗದೂತ ಸಾರಿಗೆ, ನಗರ ಹಾಗೂ ಉಪನಗರ ಸಾರಿಗೆ ಸೇವೆಗಳ ವಿವರಗಳನ್ನು ಕೆಳಕಂಡಂತೆ ನೀಡಲಾಗಿದೆ:-<br><br>
<table>
<tr><th colspan="2">ಸಾರಿಗೆ ಸೇವೆ</th><th>2023-24</th><th>2024-25</th><th>2025-26 (31.10.2025 ರವರಿಗೆ)</th><th>ವ್ಯತ್ಯಾಸ</th></tr>
<tr><td rowspan="2">ಸಾಮಾನ್ಯ</td><td>ಅನುಸೂಚಿ</td><td>2793</td><td>2836</td><td>2917</td><td>+124</td></tr>
<tr><td>ಸುತ್ತುವಳಿ</td><td>26845</td><td>27799</td><td>28850</td><td>+2005</td></tr>
<tr><td rowspan="2">ವೇಗದೂತ</td><td>ಅನುಸೂಚಿ</td><td>3766</td><td>4031</td><td>4146</td><td>+380</td></tr>
<tr><td>ಸುತ್ತುವಳಿ</td><td>12939</td><td>14268</td><td>14671</td><td>+1732</td></tr>
</table></td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|

| | | | | | |
|---|---|---|---|---|---|
| ನಗರ | ಅನುಸೂಚಿ | 405 | 414 | 405 | **0** |
| | ಸುತ್ತುವಳಿ | 5797 | 5952 | 6070 | **+273** |
| ಉಪ ನಗರ | ಅನುಸೂಚಿ | 99 | 113 | 115 | **+16** |
| | ಸುತ್ತುವಳಿ | 1532 | 1678 | 1718 | **+186** |
| ಒಟ್ಟು | **ಅನುಸೂಚಿ** | **7063** | **7394** | **7583** | **+520** |
| | **ಸುತ್ತುವಳಿ** | **47113** | **49697** | **51309** | **+4196** |

2023-24 ರ ಅಂತ್ಯಕ್ಕೆ ಹೋಲಿಸಿದಾಗ ಪ್ರಸ್ತುತ ಸಾಮಾನ್ಯ - 124, ವೇಗದೂತ -380 ಹಾಗೂ ಉಪನಗರ-16, ಒಟ್ಟು 520 ಅನುಸೂಚಿಗಳನ್ನು ಹೆಚ್ಚಿಸಲಾಗಿದೆ.

2023-24 ರ ಅಂತ್ಯಕ್ಕೆ ಹೋಲಿಸಿದಾಗ ಪ್ರಸ್ತುತ ಸಾಮಾನ್ಯ - 2005, ವೇಗದೂತ -1732, ನಗರ-273 ಹಾಗೂ ಉಪನಗರ -186, ಒಟ್ಟು 4196 ಸುತ್ತುವಳಿಗಳನ್ನು ಹೆಚ್ಚಿಸಲಾಗಿದೆ.

**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ**

ಸಂಸ್ಥೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ 25.0 ಕಿ.ಮೀ.ವರೆಗೆ ಕಾರ್ಯಾಚರಣೆ ವ್ಯಾಪ್ತಿಯನ್ನು ಹೊಂದಿದ್ದು, ಬೆಂಗಳೂರು ನಗರ ಹಾಗೂ ಹೊರ ವಲಯದಲ್ಲಿ ಪ್ರಯಾಣಿಕರ ದಟ್ಟಣೆ/ ಅವಶ್ಯಕತೆಗನುಗುಣವಾಗಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡುತ್ತಿದೆ.

2024-25ನೇ ಸಾಲಿನಲ್ಲಿ ಒಟ್ಟು 272 ಅನುಸೂಚಿ/ ಬಸ್ಸುಗಳನ್ನು ಹಾಗೂ 2025-26 ನೇ ಸಾಲಿನಲ್ಲಿ ಒಟ್ಟು 397 ಅನುಸೂಚಿಗಳನ್ನು ಹೆಚ್ಚಿಸಿ, ಕಾರ್ಯಾಚರಣೆಗೊಳಿಸಲಾಗುತ್ತಿದೆ.

ಅಲ್ಲದೇ ಸಂಸ್ಥೆಯಲ್ಲಿ ಶಕ್ತಿ ಯೋಜನೆ ಜಾರಿಗೆ ಮೊದಲು ಸಂಸ್ಥೆಯಲ್ಲಿ 5,555 ಅನುಸೂಚಿಗಳಿಂದ 56,646 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿತ್ತು, ಶಕ್ತಿ ಯೋಜನೆ ಜಾರಿಯಾದ ನಂತರದಲ್ಲಿ 6,274 ಅನುಸೂಚಿಗಳಿಂದ 65,934 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು, ಪ್ರತಿದಿನ 719 ಅನುಸೂಚಿ ಹಾಗೂ 9,288 ಸುತ್ತುವಳಿಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.

**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ**

ಸಂಸ್ಥೆಯಿಂದ ಗ್ರಾಮಾಂತರ ಮತ್ತು ಅರೇ ನಗರ ಪ್ರದೇಶಗಳಲ್ಲಿ ಬಸ್‌ಗಳ ಪ್ರಮಾಣ ಹೆಚ್ಚಿಗೆ ಮಾಡಲು 2024-25ನೇ ಸಾಲಿನಲ್ಲಿ 433 ಹೊಸ ಗ್ರಾಮಾಂತರ ಹಾಗೂ 125 ನಗರ ಸಾರಿಗೆ ಸೇರಿದಂತೆ ಒಟ್ಟು 558 ಹೊಸ ಬಸ್ಸುಗಳನ್ನು ಖರೀದಿಸಲಾಗಿರುತ್ತದೆ.

2025-26ನೇ ಸಾಲಿನಲ್ಲಿ 450 ಹೊಸ ಗ್ರಾಮಾಂತರ ಹಾಗೂ 11 ನಗರ ಸಾರಿಗೆ ಮಾದರಿಯ ವಾಹನಗಳನ್ನು ಖರೀದಿಸುವ ಯೋಜನೆ ಇದ್ದು, ಈವರೆಗೆ 11 ನಗರ ಸಾರಿಗೆ ವಾಹನಗಳನ್ನು ಖರೀದಿಸಿ ಕಾರ್ಯಾಚರಣೆ ಗೊಳಿಸಲಾಗುತ್ತಿದೆ. ಇನ್ನುಳಿದ 450 ಹೊಸ ಗ್ರಾಮಾಂತರ ವಾಹನಗಳನ್ನು ಖರೀದಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|

ಅಲ್ಲದೇ ಸಾರಿಗೆ ಸೇವೆಯನ್ನು ಉತ್ತಮ ಪಡಿಸಲು ಈ ಕೆಳಗಿನಂತೆ ಕ್ರಮಕೈಗೊಳ್ಳಲಾಗಿದೆ.

| ವರ್ಷ | ಗ್ರಾಮಾಂತರಸಾರಿಗೆ | | ಉಪನಗರಸಾರಿಗೆ | |
|---|---|---|---|---|
| | ಅನುಸೂಚಿ | ಸರತಿಗಳು | ಅನುಸೂಚಿ | ಸರತಿಗಳು |
| 2023-24 | 3796 | 24547 | 218 | 3414 |
| 2024-25 | 4124 | 27609 | 236 | 3640 |
| **ವ್ಯತ್ಯಾಸ** | **328** | **3062** | **18** | **226** |
| 2024-25 | 4124 | 27609 | 236 | 3640 |
| 2025-26 | 4222 | 27922 | 240 | 3715 |
| **ವ್ಯತ್ಯಾಸ** | **98** | **313** | **4** | **75** |

- 2024-25ನೇ ಸಾಲಿನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ 328 ಅನುಸೂಚಿಗಳಿಂದ 3062 ಸರತಿಗಳನ್ನು, ಉಪನಗರ ಪ್ರದೇಶದಲ್ಲಿ 18 ಅನುಸೂಚಿಗಳಿಂದ 226 ಸರತಿಗಳನ್ನು ಸಾರಿಗೆ ಸೌಲಭ್ಯ ಹೆಚ್ಚಿಸಲಾಗಿದೆ.

2025-26ನೇ ಸಾಲಿನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ 98 ಅನುಸೂಚಿಗಳಿಂದ 313 ಸರತಿಗಳನ್ನು, ಉಪನಗರ ಪ್ರದೇಶದಲ್ಲಿ 4 ಅನುಸೂಚಿಗಳಿಂದ 75 ಸರತಿಗಳ ಸಾರಿಗೆ ಸೌಲಭ್ಯ ಹೆಚ್ಚಿಸಲಾಗಿದೆ.

**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ**

ಪ್ರಸ್ತುತ ಗ್ರಾಮೀಣ ಮತ್ತು ಉಪನಗರ ಪ್ರದೇಶಗಳಲ್ಲಿ ಸಾರ್ವಜನಿಕ ಪ್ರಯಾಣಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳ ಬೇಡಿಕೆ/ಅವಶ್ಯಕತೆಗನುಗುಣವಾಗಿ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ಸಾರ್ವಜನಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳು ಸದರಿ ಸಾರಿಗೆಗಳ ಸದುಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ.

- ಈ ಸಂಬಂಧ ನಿಗಮದ ವ್ಯಾಪ್ತಿಯಲ್ಲಿ ಹೆಚ್ಚಿನ ಜನಸಂದಣಿ ಮಾರ್ಗಗಳನ್ನು ಗುರುತಿಸಿ ಅವಶ್ಯಕತೆಗನುಗುಣವಾಗಿ ಹೆಚ್ಚುವರಿ ಸರತಿಗಳನ್ನು ಅಳವಡಿಸಲು ಕ್ರಮವಹಿಸಲಾಗುತ್ತಿದೆ.

- ಪ್ರತಿ ತಿಂಗಳು ಮೊದಲನೆಯ ಸೋಮವಾರದಂದು ಎಲ್ಲಾ ವಿಭಾಗಗಳಲ್ಲಿ ಫೋನ್-ಇನ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಸದರಿ ಕಾರ್ಯ ಕ್ರಮದಲ್ಲಿ ಸ್ವೀಕೃತವಾಗುವ ಮನವಿ/ಅಹವಾಲುಗಳನ್ನು ಪಡೆದುಕೊಂಡು ಕ್ರಮ ಜರುಗಿಸಲಾಗುತ್ತಿದೆ.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | • ನಿಗಮದಲ್ಲಿ **"ಶಕ್ತಿ ಯೋಜನೆ"** ಜಾರಿ ಪೂರ್ವ ಮತ್ತು ನಂತರ ಅನುಸೂಚಿ/ಸರತಿಗಳ ವಿವರ ಕೆಳಕಂಡಂತಿದೆ.<br><br>(ಕೆಳಗಿನ ಕೋಷ್ಟಕ ನೋಡಿ)<br><br>"ಶಕ್ತಿ ಯೋಜನೆ" ಪೂರ್ವಕ್ಕೆ ಹೋಲಿಸಿದಲ್ಲಿ ಪ್ರತಿ ದಿನ 687 ಹೆಚ್ಚಿನ ಅನುಸೂಚಿಗಳಿಂದ 5760 ಹೆಚ್ಚುವರಿ ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. |
| ಇ. | ಮಳೆಗಾಲದಲ್ಲಿ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ವಾಹನ ನಿಲುಗಡೆ ಸಮಸ್ಯೆ ಮತ್ತು ನೀರು ನಿಂತು ವಾಹನ ಸಂಚಾರ ಕಷ್ಟಕರ ವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಕೈಗೊಂಡಿರುವ ಕ್ರಮವೇನು? (ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯಾಪ್ತಿಯ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಅವಶ್ಯವಿರುವ ದುರಸ್ತಿ ಕಾಮಗಾರಿ ಕೆಲಸಗಳನ್ನು ಕೈಗೊಳ್ಳುವ ಕುರಿತು ಟೆಂಡರ್ ಆಹ್ವಾನಿಸಿದ್ದು, ಕಾಮಗಾರಿಯು ಮುಕ್ತಾಯದ ಹಂತದಲ್ಲಿರುತ್ತದೆ.<br><br>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವ್ಯಾಪ್ತಿಯ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಜನವರಿ-2025ರ ಮಾಹೆಯಲ್ಲಿ ವೈಟ್ ಟ್ಯಾಪಿಂಗ್ ಕಾಮಗಾರಿಯು ಪೂರ್ಣಗೊಂಡಿದ್ದು, ಪ್ರಸ್ತುತ ಬಸ್ ನಿಲ್ದಾಣದಲ್ಲಿ ಮಳೆ ನೀರು ನಿಂತು ಬಸ್ಸುಗಳ ಸಂಚಾರಕ್ಕೆ ತೊಂದರೆಯಾಗುವ ಸ್ಥಿತಿ ಇರುವುದಿಲ್ಲ. |

| ವಿವರ | ಶಕ್ತಿಯೋಜನೆ ಪೂರ್ವ | ಶಕ್ತಿಯೋಜನೆ ನಂತರ | ಹೆಚ್ಚುವರಿ |
|---|---|---|---|
| ಒಟ್ಟು ಅನುಸೂಚಿಗಳು | 4028 | 4715 | **687** |
| ಒಟ್ಟು ಅನುಸೂಚಿ ಕಿ.ಮೀ (ಲಕ್ಷಗಳಲ್ಲಿ) | 14.46 | 17.30 | **2.84** |
| ಒಟ್ಟು ಸರತಿಗಳ ಸಂಖ್ಯೆ | 22214 | 27974 | **5760** |

ಸಂಖ್ಯೆ: ಟಿಡಿ 212 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ

**ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಸಾರಿಗೆ ಸೇವೆಗಳ ಬಲವರ್ಧನೆಗಾಗಿ ಸರ್ಕಾರ ಕೈಗೊಂಡಿರುವ ಯೋಜನೆಗಳು ಕೆಳಕಂಡಂತಿದೆ:-**

<u>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:-</u>

1. ನಿಗಮದಲ್ಲಿ ಕ್ರೂಢೀಕೃತವಾದ ಹಿಂಬಾಕಿ ಮೊಬಲಗನ್ನು ಪಾವತಿಸಲು ಸರ್ಕಾರವು ಕ.ರಾ.ರ.ಸಾ.ನಿಗಮಕ್ಕೆ 2022-23ನೇ ಸಾಲಿನಲ್ಲಿ ರೂ.555.00 ಕೋಟಿಗಳ ವಿಶೇಷ ಅನುದಾನವನ್ನು ಬಿಡುಗಡೆಗೊಳಿಸಿದೆ, ಮುಂದುವರೆದು, ಸರ್ಕಾರವು ಪ್ರಯಾಣಿಕರಿಗೆ ಸಾರಿಗೆ ಮೂಲಭೂತ ಸೌಲಭ್ಯವನ್ನು ಕಲ್ಪಿಸಲು ಕ.ರಾ.ರ.ಸಾ.ನಿಗಮಕ್ಕೆ 2022-23 ನೇ ಸಾಲಿನಲ್ಲಿ ರೂ.30.00 ಕೋಟಿಗಳು, 2023-24 ನೇ ಸಾಲಿನಲ್ಲಿ ರೂ.40.00 ಕೋಟಿಗಳು ಮತ್ತು 2024-25 ನೇ ಸಾಲಿನಲ್ಲಿ ರೂ.33.14 ಕೋಟಿಗಳ ಅನುದಾನವನ್ನು ಬಿಡುಗಡೆಗೊಳಿಸಿರುತ್ತದೆ ಹಾಗೂ ಹೊಸ ವಾಹನ ಖರೀದಿಗಾಗಿ 2023-24ನೇ ಸಾಲಿನಲ್ಲಿ ನಿಗಮಕ್ಕೆ ರೂ.100.00 ಕೋಟಿಗಳ ವಿಶೇಷ ಬಂಡವಾಳ ಅನುದಾನವನ್ನು ನೀಡಿರುತ್ತದೆ.
2. ಸರ್ಕಾರದ ಆದೇಶ ಸಂಖ್ಯೆ ಟಿಡಿ 45 ಟಿಸಿಬಿ 2023, ಬೆಂಗಳೂರು ದಿನಾಂಕ 31.12.2024 ರನ್ವಯ ಸಾರಿಗೆ ನಿಗಮಗಳ ಬಾಕಿ ಹೊಣೆಗಾರಿಕೆಗಳಾದ ಭವಿಷ್ಯ ನಿಧಿ ಹಾಗೂ ಇಂಧನದ ಬಾಕಿ ಮೊತ್ತ ಪಾವತಿಸಲು ಕ.ರಾ.ರ.ಸಾ.ನಿಗಮಕ್ಕೆ ರೂ.623.80 ಕೋಟಿಗಳ ಸಾಲವನ್ನು ಸರ್ಕಾರದ ಖಾತರಿ/ಗ್ಯಾರಂಟಿಯೊಂದಿಗೆ ಹಣಕಾಸು ಸಂಸ್ಥೆಗಳಿಂದ ಪಡೆಯಲು ಅನುಮೋದನೆ ನೀಡಿ, 2025-26ನೇ ಸಾಲಿನಲ್ಲಿ ಸದರಿ ಸಾಲದ ಅಸಲು ಮತ್ತು ಬಡ್ಡಿ ಮರುಪಾವತಿಗಾಗಿ ರೂ.141.00 ಕೋಟಿಗಳನ್ನು ಪ್ರಾವಧಾನ ಮಾಡಿದ್ದು, ನವೆಂಬರ್-25ರ ಅಂತ್ಯದವರೆಗೆ ರೂ.60.03 ಕೋಟಿಗಳನ್ನು ಬಿಡುಗಡೆ ಮಾಡಿದೆ.
3. ನಿಗಮದ ನಗದು ಕೊರತೆಯನ್ನು ನಿಭಾಯಿಸಲು 2022-23ನೇ ಸಾಲಿನಲ್ಲಿ ನಿಗಮವು ಪಾವತಿಸಬೇಕಾದ ಮೋಟಾರು ವಾಹನ ತೆರಿಗೆ ರೂ193.61 ಕೋಟಿಗಳ ಪಾವತಿಯನ್ನು ಮುಂದೂಡಿ ಆದೇಶಿಸಿದೆ. 2023-24ನೇ ಸಾಲಿನಲ್ಲಿ ನಿಗಮವು ಸರ್ಕಾರಕ್ಕೆ ಪಾವತಿ ಮಾಡಬೇಕಾದ ಮೋಟಾರು ವಾಹನ ತೆರಿಗೆ ರೂ.243.52 ಕೋಟಿಗಳ ಪಾವತಿಯಿಂದ ವಿನಾಯಿತಿಯನ್ನು ನೀಡಿರುತ್ತದೆ ಹಾಗೂ 2024-25ನೇ ಸಾಲಿನಲ್ಲಿ ಕ.ರಾ.ರ.ಸಾ.ನಿಗಮವು ಸರ್ಕಾರಕ್ಕೆ ಪಾವತಿಸಬೇಕಾದ ಮೋಟಾರು ವಾಹನ ತೆರಿಗೆ ಮೊತ್ತ ರೂ.282.75 ಕೋಟಿಗಳನ್ನು ಪುಸ್ತಕ ಹೊಂದಾಣಿಕೆ ಮೂಲಕ ಪಾವತಿಸಲು ಅನುದಾನವನ್ನು ಬಿಡುಗಡೆ ಮಾಡಿದೆ.
4. ಕ.ರಾ.ರ.ಸಾ.ನಿಗಮದ ವತಿಯಿಂದ ಸಾಮಾನ್ಯ, ನಗರ ಮತ್ತು ವೇಗದೂತ ಸಾರಿಗೆಗಳಲ್ಲದೆ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಅಶ್ವಮೇಧ ಕ್ಲಾಸಿಕ್, ರಾಜಹಂಸ, ಐರಾವತ, ಎ.ಸಿ ಸ್ಲೀಪರ್, ನಾನ್ ಎಸಿ ಸ್ಲೀಪರ್, ಪಲ್ಲಕ್ಕಿ, ಐರಾವತ ಕ್ಲಬ್‌ಕ್ಲಾಸ್, ಫ್ಲೈ-ಬಸ್, ಅಂಬಾರಿ ಡ್ರೀಮ್‌ಕ್ಲಾಸ್, ಅಂಬಾರಿ ಉತ್ಸವ, ಇವಿ ಪವರ್ ಪ್ಲಸ್ ಮುಂತಾದ ಪ್ರತಿಷ್ಠಿತ ಸಾರಿಗೆಗಳನ್ನು ಕಾರ್ಯಾಚರಿಸಿ ರಾಜ್ಯದ ಹಾಗೂ ನೆರೆ ರಾಜ್ಯದ ಪ್ರಮುಖ ಸ್ಥಳಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.

5. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ 2023-24 ರಲ್ಲಿ 440 ಬಸ್ಸುಗಳು, 2024-25ರಲ್ಲಿ 698 ಬಸ್ಸುಗಳು ಹಾಗೂ 2025-26ನೇ ಸಾಲಿನ ಅಕ್ಟೋಬರ್-2025ವರೆಗೆ 10 ಬಸ್ಸುಗಳು ಒಟ್ಟು 1148 ಹೊಸ ಬಸ್ಸುಗಳನ್ನು ಖರೀದಿಸಿ, ನಿಗಮದ ವಾಹನಬಲಕ್ಕೆ ಸೇರ್ಪಡೆಗೊಳಿಸಲಾಗಿದೆ.ಮುಂದುವರೆದು, ನಿಗಮದ 8 ರಿಂದ 10 ಲಕ್ಷ ಕಿ.ಮೀ ಕ್ರಮಿಸಿರುವ ಒಟ್ಟು 1567 ಹಳೆಯ ವಾಹನಗಳನ್ನು ಪುನಃಶ್ಚೇತನಗೊಳಿಸಲಾಗಿದೆ.

6. ನಿಗಮವು ಒಟ್ಟು14 ನಗರಗಳಲ್ಲಿಅಂದರೆ ತುಮಕೂರು, ಮೈಸೂರು, ಹಾಸನ, ಮಂಡ್ಯ, ರಾಮನಗರ, ಮಂಗಳೂರು, ಉಡುಪಿ, ಕೋಲಾರ, ಕೆ.ಜಿ.ಎಫ್., ದಾವಣಗೆರೆ, ಶಿವಮೊಗ್ಗ, ಭದ್ರಾವತಿ, ಚಿತ್ರದುರ್ಗ, ಮತ್ತು ಚಿಕ್ಕಮಗಳೂರು ನಗರಗಳಲ್ಲಿ ನಗರ ಸಾರಿಗೆಗಳನ್ನು ನಗರ ಮತ್ತು ಹೊರವಲಯಗಳಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ.

7. ಕ.ರಾ.ರ.ಸಾನಿಗಮವು ಟಿಕೆಟ್ ವಿತರಣೆಯಲ್ಲಿ ಸರಳತೆ ಹಾಗೂ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಸ್ಮಾರ್ಟ್ ಇ.ಟಿ.ಎಂ(Electronic Ticketing Machine)ಜಾರಿಗೆ ತಂದಿರುತ್ತದೆ. ಸದರಿ ಇ.ಟಿ.ಎಂ.ಗಳಲ್ಲಿ Dynamic QR ಆಧಾರಿತ UPI ಹಣ ಪಾವತಿಯನ್ನು ಜಾರಿಗೊಳಿಸಲಾಗಿದ್ದು, ಪ್ರಯಾಣಿಕರು ಹಣರಹಿತವಾಗಿ (Cashless) UPI ಮೂಲಕ ಹಣ ಪಾವತಿ ಮಾಡಿ ಟಿಕೆಟನ್ನು ಪಡೆದು ಪ್ರಯಾಣಿಸಬಹುದಾಗಿದೆ,

8. ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಮೈಸೂರು, ಮಂಗಳೂರು-ಉಡುಪಿ-ಕುಂದಾಪುರ, ಕುಶಾಲನಗರ-ಮಡಿಕೇರಿ, ದಾವಣಗೆರೆಗೆ ನೇರ ಸಂಪರ್ಕ ಕಲ್ಪಿಸಲು "Fly bus" ಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.

9. ಸಾರ್ವಜನಿಕ ಪ್ರಯಾಣಿಕರಿಗೆ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಅನುಕೂಲಕ್ಕಾಗಿ ನಿಗಮವು ಅವತಾರ್ (ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಟಿಕೆಟು ಕಾಯ್ದಿರಿಸುವಿಕೆ) ಗಣಕೀಕೃತ ಮುಂಗಡ ಬುಕಿಂಗ್ ಯೋಜನೆ ಜಾರಿಗೊಳಿಸಿದ್ದು, ರಾಜ್ಯದ ಹಾಗೂ ಹೊರ ರಾಜ್ಯಗಳ ಪ್ರಮುಖ ಸ್ಥಳಗಳಲ್ಲಿ ನಿಗಮದ ಕೌಂಟರುಗಳು/ಖಾಸಗಿ ಬುಕಿಂಗ್ ಏಜೆಂಟರುಗಳ ಮೂಲಕ ಮುಂಗಡ ಟಿಕೆಟ್ ಬುಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಸದರಿ ಯೋಜನೆಯಲ್ಲಿ ಡಿಜಿಟಲ್ ಹಣ ಪಾವತಿಯನ್ನು ಸಕ್ರಿಯೆಗೊಳಿಸಲಾಗಿದೆ.

10. ಕರಾರಸಾ ನಿಗಮದ ಸಾರಿಗೆಗಳಲ್ಲಿ ಮುಂಗಡ ಆಸನಗಳನ್ನು ಗುಂಪಾಗಿ (ಅಂದರೆ ನಾಲ್ಕು ಜನ ಮತ್ತು ಅದಕ್ಕೆ ಮೇಲ್ಪಟ್ಟು) ಕಾಯ್ದಿರಿಸಿದಲ್ಲಿ ಶೇ.5ರಷ್ಟು ವಿಶೇಷ ರಿಯಾಯಿತಿಯನ್ನು ಕಲ್ಪಿಸಲಾಗಿದೆ ಹಾಗೂ ಮುಂಗಡ ಆಸನವನ್ನು ಹೋಗುವ ಮತ್ತು ಬರುವ (Onward/Return) ಒಮ್ಮೆಲೆ ಕಾಯ್ದಿರಿಸಿದಲ್ಲಿ ಬರುವ (Return) ಪ್ರಯಾಣಕ್ಕೆ ಶೇ.10ರಷ್ಟು ವಿಶೇಷ ರಿಯಾಯಿತಿಯನ್ನು ಕಲ್ಪಿಸಲಾಗಿದೆ.

11. ಕರಾರಸಾ ನಿಗಮದ ಸಾರಿಗೆಗಳಲ್ಲಿ ಮುಂಗಡ ಆಸನಗಳನ್ನು ಕಾಯ್ದಿರಿಸಲು ಜಿ.ಪಿಆರ್ ಎಸ್ ಸೌಲಭ್ಯವುಳ್ಳ ಮೊಬೈಲ್ ದೂರವಾಣಿ ಮೂಲಕ ಮುಂಗಡ ಟಿಕೆಟು ಕಾಯ್ದಿರಿಸುವ ಎಂ- ಬುಕಿಂಗ್ಮತ್ತುಇ- ಬುಕಿಂಗ್ ವ್ಯವಸ್ಥೆ ಜಾರಿಗೊಳಿಸಿದೆ ಹಾಗೂ ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಆಪ್ ಮೂಲಕ ಮುಂಗಡ ಟಿಕೆಟು ಕಾಯ್ದಿರಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಸದರಿ ಮುಂಗಡ ಆಸನಗಳನ್ನು ಕಾಯ್ದಿರಿಸಲು ಎಲ್ಲಾ ಡೆಬಿಟ್/ಕ್ರೆಡಿಟ್ ಕಾರ್ಡ್‌ಗಳ ಮೂಲಕ ಹಣ ಪಾವತಿಸಲು ಅವಕಾಶ ಕಲ್ಪಿಸಿದ್ದು, ಈ ಸಂಬಂಧ ತಗಲುವ ಗೇಟ್‌ವೇ ಶುಲ್ಕವನ್ನು ಪ್ರಯಾಣಿಕರಿಂದ ಪಡೆಯುತ್ತಿರುವುದಿಲ್ಲ.

12. ಕೌಂಟರ್‌ಗಳ ಮೂಲಕ ಮುಂಗಡ ಟಿಕೆಟ್ ಕಾಯ್ದಿರಿಸಿರುವ ಟಿಕೆಟ್‌ಗಳಿಗೆ ಪ್ರಯಾಣವನ್ನು ಮುಂದೂಡುವ ಮತ್ತು ಹಿಂದೂಡುವವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

13. ಒಂಟಿಯಾಗಿ ಪ್ರಯಾಣ ಮಾಡುವ ಮಹಿಳೆಯರಿಗಾಗಿ, ಮಹಿಳೆಯರು ಮಾತ್ರ ಕಾಯ್ದಿರಿಸಬಹುದಾದ ಆಸನಗಳ ವ್ಯವಸ್ಥೆ ಕಲ್ಪಿಸಲಾಗಿದೆ.

14. ನಿಗಮದ ಸಾರಿಗೆಗಳಲ್ಲಿ ಮುಂಗಡ ಕಾಯ್ದಿರಿಸಿರುವ ಪ್ರಯಾಣಿಕರಿಗೆ ಪ್ರಯಾಣ ವೇಳೆಯ ಎರಡು ಗಂಟೆಯ ಮುಂಚಿತವಾಗಿ ನಗರ ಸಾರಿಗೆಗಳಿರುವ ನಗರಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.

15. ಮುಂಗಡವಾಗಿ ಸೀಟು ಕಾಯ್ದಿರಿಸುವ ಪ್ರಯಾಣಿಕರಿಗೆ ಅವರುಗಳು ಪ್ರಯಾಣ ಮಾಡುವ ವಾಹನಸಂಖ್ಯೆ, ನಿರ್ಗಮನದ ಸಮಯ ಹಾಗೂ ಸದರಿ ವಾಹನದಲ್ಲಿ ಕರ್ತವ್ಯ ನಿರ್ವಹಿಸುವ ಚಾಲನಾ ಸಿಬ್ಬಂದಿಯ ಮೊಬೈಲ್ ಸಂಖ್ಯೆಗಳನ್ನು ಎಸ್.ಎಂ.ಎಸ್. ಮೂಲಕ ಮಾಹಿತಿಯನ್ನು ಒದಗಿಸಲಾಗುತ್ತಿದೆ.

16. ಪ್ರಯಾಣಿಕರ ಅನುಕೂಲಕ್ಕಾಗಿ ಆನ್‌ಲೈನ್ ಅಥವಾ ಮೊಬೈಲ್ ಮೂಲಕ ಟಿಕೆಟ್ ಕಾಯ್ದಿರಿಸಿ, ಎಂ-ಟಿಕೆಟನ್ನು ಲ್ಯಾಪ್‌ಟಾಪ್/ಐಪ್ಯಾಡ್/ಟ್ಯಾಬ್ಲೆಟ್ ಅಥವಾ ಮೊಬೈಲ್ ಪೋನ್‌ನಲ್ಲಿ ತೋರಿಸಿ ಪ್ರಯಾಣಿಸಲು ಅನುವು ಮಾಡಿಕೊಡಲಾಗಿದೆ.

17. ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ನಿಗಮದ ಪ್ರಮುಖ 111 ಬಸ್ ನಿಲ್ದಾಣಗಳಲ್ಲಿ ವಾಹನಗಳ ಸಂಖ್ಯೆ, ನಿರ್ಗಮನದ ವೇಳೆ, ತಲುಪುವ ಸ್ಥಳ, ಮಾರ್ಗದ ಮಾಹಿತಿಯನ್ನು ಸಾರ್ವಜನಿಕ ಉದ್ಘೋಷಣಾ ವ್ಯವಸ್ಥೆಯ ಮುಖಾಂತರ ತಿಳಿಸಲಾಗುತ್ತಿದೆ.

18. ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಹಾಗೂ ಸಾರಿಗೆ ಆದಾಯ ಹೆಚ್ಚಿಸುವ ದೃಷ್ಟಿಯಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಪ್ಯಾಕೇಜ್ ಪ್ರವಾಸಗಳನ್ನು ಕಾರ್ಯಾಚರಿಸಲಾಗುತ್ತಿದೆ.

19. ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ "ಶಕ್ತಿ ಯೋಜನೆ"ಯನ್ನು ದಿನಾಂಕ 11.06.2023 ರಿಂದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಿದ್ದು, ಯಶಸ್ವಿಯಾಗಿ ಜಾರಿಯಲ್ಲಿರುತ್ತದೆ.

**ಯೋಜನೆಯ ಪ್ರಮುಖ ಅಂಶಗಳು:**

ಕರ್ನಾಟಕ ರಾಜ್ಯದ ನಿವಾಸಿ (Domicile of Karnataka) ಮಹಿಳೆಯರಿಗೆ (ಲಿಂಗತ್ವ ಅಲ್ಪ ಸಂಖ್ಯಾತರು, ವಿದ್ಯಾರ್ಥಿನಿಯರು ಸೇರಿದಂತೆ) ಉಚಿತ ಪ್ರಯಾಣ ಸೌಲಭ್ಯ.

ರಾಜ್ಯದ ನಾಲ್ಕೂ ಸಾರಿಗೆ ನಿಗಮಗಳ ನಗರ, ಸಾಮಾನ್ಯ ಹಾಗೂ ವೇಗದೂತ ಬಸ್ಸುಗಳಲ್ಲಿ ರಾಜ್ಯದೊಳಗೆ ಉಚಿತ ಪ್ರಯಾಣಕ್ಕೆ ಅವಕಾಶ. (ಅಂತರರಾಜ್ಯ ಸಾರಿಗೆಗಳು ಹಾಗೂ ಪ್ರತಿಷ್ಠಿತ ಸಾರಿಗೆಗಳನ್ನು ಹೊರತುಪಡಿಸಿ).

- ಫಲಾನುಭವಿಗಳ ಗುರುತಿನ ಚೀಟಿಯನ್ನು ಪರಿಶೀಲಿಸಿ, ಇಟಿಎಂ ಮುಖಾಂತರ ಶೂನ್ಯ ಟಿಕೆಟ್ ವಿತರಣೆ.
- ಮುಂಗಡ ಬುಕಿಂಗ್ ಸೌಲಭ್ಯವಿರುವ ಬಸ್ಸುಗಳಲ್ಲಿ, ಮುಂಗಡ ಆಸನ ಕಾಯ್ದಿರಿಸುವ ಸೌಲಭ್ಯ.
- ಯೋಜನೆಯ ವೆಚ್ಚವನ್ನು ಇ.ಟಿ.ಎಂ.ಗಳಿಂದ ವಿತರಿಸಲಾದ ಶೂನ್ಯ ಟಿಕೆಟ್ ದತ್ತಾಂಶವನ್ನು ಆಧರಿಸಿ ನಿಗಮಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡಲಾಗುವುದು.

# ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಅ) ಸಂಸ್ಥೆಯ ಆರ್ಥಿಕ ಪರಿಸ್ಥಿತಿಯನ್ನು ಮನಗಂಡ ಸರ್ಕಾರವು ಕಳೆದ ಎರಡು ವರ್ಷದಲ್ಲಿ ಹಾಗೂ ಪ್ರಸಕ್ತ ವರ್ಷದಲ್ಲಿ ಸಂಸ್ಥೆಗೆ ಈ ಕೆಳಕಂಡಂತೆ ಆರ್ಥಿಕ ನೆರವನ್ನು ಒದಗಿಸಿರುತ್ತದೆ.

(ರೂ.ಕೋಟಿಗಳಲ್ಲಿ)

| ಕ್ರ.ಸಂ | ವಿವರಗಳು | 2023-24 | 2024-25 | 2025-26 (27/11/2025 ರವರೆಗೆ ) |
|---|---|---|---|---|
| 1 | **ಧನಸಹಾಯ /ಪರಿಹಾರ**<br>ಅ) ಸಂಸ್ಥೆಯು ಆರ್ಥಿಕ ನಷ್ಟವನ್ನು ಪರಿಗಣಿಸಿ Opex difference in cost (Viability of Gap Funding -VGF)<br>ಆ) ಪಿ.ಎಫ್ ಹಿಂಬಾಕಿ ಪಾವತಿ, ಇಂಧನ ವೆಚ್ಚ, ಸಿಬ್ಬಂದಿ/ಇತರೆ ಬಾಕಿ ಪಾವತಿಗಳಗಾಗಿ ವಿಶೇಷ ಅನುದಾನ | 253.29<br>-- | 124.89<br>-- | 112.50 (ಹಂಚಿಕೆ ರೂ.150.00 ಕೋಟಿ) |
| 2 | ಮೋಟಾರು ವಾಹನ ತೆರಿಗೆ ವಿನಾಯಿತಿ | 119.88 | 94.45* | -- |

( * - 2024-25 ನೇ ಸಾಲಿನಲ್ಲಿ ಸಂಸ್ಥೆಯು ಸರ್ಕಾರಕ್ಕೆ ಪಾವತಿಸಬೇಕಿದ್ದ ಮೋಟಾರು ವಾಹನ ತೆರಿಗೆ ಸಂಬಂಧ ರೂ.94.45 ಕೋಟಿಗಳನ್ನು ವಿದ್ಯಾರ್ಥಿ ಪಾಸ್ ಸಹಾಯಧನ (ಸಾಮಾನ್ಯ) ಲೆಕ್ಕ ಶೀರ್ಷಿಕೆ 3055-00-190-0-03-106 ರಡಿ ಹೆಚ್ಚುವರಿಯಾಗಿ ಒದಗಿಸಿ ಪುಸ್ತಕ ಹೊಂದಾಣಿಕೆ ಮಾಡಲಾಗಿರುತ್ತದೆ.)

ಆ) ಸಂಸ್ಥೆಯ ಬಾಕಿ ಹೊಣೆಗಾರಿಕೆಗಳ ಪೈಕಿ ಬಹುಮುಖ್ಯವಾದ ಇಂಧನ ಮತ್ತು ಭವಿಷ್ಯ ನಿಧಿ ಬಾಕಿ ತೀರುವಳಿಗೆ 2025-26ನೇ ಸಾಲಿನಲ್ಲಿ ರೂ.589.20 ಕೋಟಿಗಳ ಸಾಲವನ್ನು ಸರ್ಕಾರದ ಖಾತರಿ/ಗ್ಯಾರಂಟಿಯೊಂದಿಗೆ ಪಡೆದು, ಇಂಧನ ಬಾಕಿ ತೀರುವಳಿಗೆ ರೂ.182.00 ಕೋಟಿ ಮತ್ತು ಭವಿಷ್ಯ ನಿಧಿ ಬಾಕಿ ತೀರುವಳಿಗೆ ರೂ. 407.20 ಕೋಟಿಗಳನ್ನು ಉಪಯೋಗಿಸಲಾಗಿದೆ. ಸದರಿ ಸಾಲದ ಮರುಪಾವತಿಗೆ ಸರ್ಕಾರವು ಪ್ರಸಕ್ತ ಸಾಲಿನಲ್ಲಿ ರೂ.131.00 ಕೋಟಿಗಳ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಿದೆ.

ಇ) ರಾಜ್ಯ ಸರ್ಕಾರವು ಸಾರಿಗೆ ಸೇವೆಯನ್ನು ಬಲವರ್ಧನೆಗೊಳಿಸುವ ನಿಟ್ಟಿನಲ್ಲಿ ಬೆಂ.ಮ.ಸಾ.ಸಂಸ್ಥೆಗೆ ಡೀಸೆಲ್ ಬಸ್ಸುಗಳನ್ನು ಖರೀದಿಸಲು ರೂ.336.00 ಕೋಟಿಗಳ ಅನುದಾನವನ್ನು ನೀಡಿದ್ದು, ಸದರಿ ಅನುದಾನದಲ್ಲಿ 840 ಬಿ.ಎಸ್-6 ಡೀಸೆಲ್ ಬಸ್ಸುಗಳನ್ನು ಖರೀದಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಹಾಗೂ ಎಲೆಕ್ಟ್ರಿಕ್ ಬಸ್ಸುಗಳನ್ನು ಜಿಸಿಸಿ ಮಾದರಿಯಲ್ಲಿ ಆಚರಣೆ ಮಾಡಲು ರೂ.150.00 ಕೋಟಿಗಳ ಅನುದಾನವನ್ನು ನೀಡಿದ್ದು, ಸದರಿ ಅನುದಾನದಲ್ಲಿ 320 ಹವಾನಿಯಂತ್ರಿತ ಎಲೆಕ್ಟ್ರಿಕ್ ಬಸ್ಸುಗಳನ್ನು ಸರಬರಾಜು ಮಾಡಲು ಆದೇಶವನ್ನು ನೀಡಿದ್ದು, ಸದರಿ ಬಸ್ಸುಗಳಲ್ಲಿ 266 ಬಸ್ಸುಗಳನ್ನು ಆಚರಣೆ ಮಾಡಲಾಗುತ್ತಿದ್ದು, ಉಳಿದ ಬಸ್ಸುಗಳನ್ನು ಹಂತ ಹಂತವಾಗಿ ಕಾರ್ಯಾಚರಣೆ ಮಾಡಲಾಗುವುದು.

(signature)

ಮುಖ್ಯ ಸಂಚಾರ ವ್ಯವಸ್ಥಾಪಕರು(ಆ)

ಬೆಂ.ಮ.ಸಾ.ಸಂಸ್ಥೆ

## ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ

1. ನಿಗಮದಲ್ಲಿ ಕ್ರೋಢೀಕೃತವಾದ ಹಿಂಬಾಕಿ ಮೊಬಲಗನ್ನು ಪಾವತಿಸಲು ಸರ್ಕಾರವು ಕ.ಕ.ರ.ಸಾ. ನಿಗಮಕ್ಕೆ 2022-23ನೇ ಸಾಲಿನಲ್ಲಿ ರೂ. 205.00 ಕೋಟಿ ವಿಶೇಷ ಅನುದಾನವನ್ನು ಬಿಡುಗಡೆಗೊಳಿಸಿದೆ, ಮುಂದುವರೆದು, ಸರ್ಕಾರವು ಪ್ರಯಾಣಿಕರಿಗೆ ಸಾರಿಗೆ ಮೂಲಭೂತ ಸೌಲಭ್ಯವನ್ನು ಕಲ್ಪಿಸಲು ಕ.ಕ.ರ.ಸಾ. ನಿಗಮಕ್ಕೆ 2022-23ನೇ ಸಾಲಿನಲ್ಲಿ ರೂ.14.43 ಕೋಟಿ, 2023-24ನೇ ಸಾಲಿನಲ್ಲಿ ರೂ.20.14 ಕೋಟಿ ಮತ್ತು 2024-25ನೇ ಸಾಲಿನಲ್ಲಿ ರೂ.11.38 ಕೋಟಿ ಅನುದಾನವನ್ನು ಬಿಡುಗಡೆಗೊಳಿಸಿರುತ್ತದೆ ಹಾಗೂ ಹೊಸ ವಾಹನ ಖರೀದಿಗಾಗಿ 2023-24ನೇ ಸಾಲಿನಲ್ಲಿ ನಿಗಮಕ್ಕೆ ರೂ.100.00 ಕೋಟಿ ವಿಶೇಷ ಬಂಡವಾಳ ಅನುದಾನವನ್ನು ನೀಡಿರುತ್ತದೆ.
2. ಘನ ಸರ್ಕಾರವು ಸರ್ಕಾರದ ಆದೇಶ ಸಂಖ್ಯೆ ಟಿಡಿ 45 ಟಿಸಿಬಿ 2023, ಬೆಂಗಳೂರು ದಿನಾಂಕ 31.12.2024 ರನ್ವಯ ಸಾರಿಗೆ ನಿಗಮಗಳ ಬಾಕಿ ಹೊಣೆಗಾರಿಕೆಗಳಾದ ಭವಿಷ್ಯ ನಿಧಿ ಹಾಗೂ ಇಂಧನದ ಬಾಕಿ ಮೊತ್ತ ಪಾವತಿಸಲು ಕ.ಕ.ರ.ಸಾ.ನಿಗಮಕ್ಕೆ ರೂ.141.00 ಕೋಟಿ ಸಾಲವನ್ನು ಸರ್ಕಾರದ ಖಾತರಿ/ ಗ್ಯಾರಂಟಿಯೊಂದಿಗೆ ಹಣಕಾಸು ಸಂಸ್ಥೆಗಳಿಂದ ಪಡೆಯಲು ಅನುಮೋದನೆ ನೀಡಿ, 2025-26ನೇ ಸಾಲಿನಲ್ಲಿ ಸದರಿ ಸಾಲದ ಅಸಲು ಮತ್ತು ಬಡ್ಡಿ ಮರುಪಾವತಿಗಾಗಿ ರೂ.32.00 ಕೋಟಿ ಪ್ರಾವಧಾನ ಮಾಡಿದೆ.
3. ನಿಗಮದ ನಗದು ಕೊರತೆಯನ್ನು ನಿಭಾಯಿಸಲು 2022-23ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ಟಿಡಿ/35/ಟಿಸಿಬಿ/2020 ದಿನಾಂಕ:11-08-2022 ರನ್ವಯ ನಿಗಮವು ಪಾವತಿಸಬೇಕಾದ ಮೋಟಾರು ವಾಹನ ತೆರಿಗೆ ರೂ.392.33 ಕೋಟಿ ಸರ್ಕಾರದ ಬಂಡವಾಳವನ್ನಾಗಿ ಪರಿವರ್ತಿಸಿ ಹಾಗೂ ಸರ್ಕಾರಕ್ಕೆ ಪಾವತಿಸಬೇಕಾದ ಮೋಟಾರು ವಾಹನ ತೆರಿಗೆ ಮೊತ್ತ ರೂ.18.32 ಕೋಟಿ ಪಾವತಿಯಿಂದ ವಿನಾಯಿತಿ ನೀಡಿ ಆದೇಶ ಹೊರಡಿಸಿರುತ್ತದೆ.
4. 2023-24ನೇ ಸಾಲಿನಲ್ಲಿ ನಿಗಮವು ಸರ್ಕಾರಕ್ಕೆ ಪಾವತಿ ಮಾಡಬೇಕಾದ ಮೋಟಾರು ವಾಹನ ತೆರಿಗೆ ರೂ.114.16 ಕೋಟಿ ಪಾವತಿಯಿಂದ ವಿನಾಯಿತಿಯನ್ನು ನೀಡಿರುತ್ತದೆ.
5. 2024-25ನೇ ಸಾಲಿನಲ್ಲಿ ಕ.ಕ.ರ.ಸಾ. ನಿಗಮವು ಸರ್ಕಾರಕ್ಕೆ ಪಾವತಿಸಬೇಕಾದ ಮೋಟಾರು ವಾಹನ ತೆರಿಗೆ ಮೊತ್ತ ರೂ. 134.58 ಕೋಟಿ ಪುಸ್ತಕ ಹೊಂದಾಣಿಕೆ ಮಾಡಲಾಗಿದೆ.

<u>ನಿಗಮದಿಂದ ಸಾರಿಗೆ ಸೇವೆ ಬಲವರ್ಧನೆಗಾಗಿ ಸಂಚಾರ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳ ವಿವರ ಕೆಳಕಂಡಂತಿದೆ.</u>

- ಘಟಕ/ವಿಭಾಗಗಳ ಮಟ್ಟದಲ್ಲಿ ದಿನಂಪ್ರತಿ ಅನುಸೂಚಿವಾರು ಆದಾಯವನ್ನು ಪರಿಶೀಲಿಸಿ, ಕಡಿಮೆ ಆದಾಯ ಬರುವ/ಹೆಚ್ಚಿಗೆ ನಷ್ಟ ಉಂಟು ಮಾಡುವ ಅನುಸೂಚಿಗಳನ್ನು ಪರಿಷ್ಕರಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.
- ಚಾಲನಾ ಸಿಬ್ಬಂದಿಗಳು ಸಮರ್ಪಕವಾಗಿ ಬಳಕೆಯಾಗುವಂತೆ ಅನುಸೂಚಿಗಳನ್ನು ಸೂಕ್ತ ರೀತಿಯಲ್ಲಿ ಪರಿಷ್ಕರಣೆ ಮಾಡಲಾಗುತ್ತಿದೆ.
- ಖಾಸಗಿ ವಾಹನಗಳ ಪೈಪೋಟಿ ಇರುವ ಮಾರ್ಗಗಳಲ್ಲಿ ಪ್ರೋತ್ಸಾಹದಾಯಕ ಪ್ರಯಾಣದರಗಳನ್ನು ಜಾರಿಗೊಳಿಸಿ ಪ್ರಯಾಣಿಕರನ್ನು ನಿಗಮದ ಸಾರಿಗೆಗಳತ್ತ ಆಕರ್ಷಿಸಲು ಕ್ರಮವಹಿಸಲಾಗುತ್ತಿದೆ.
- ಉತ್ತಮ ಆದಾಯ ಬರುವ ಮಾರ್ಗಗಳಲ್ಲಿ ಹೊಸ ವಾಹನಗಳನ್ನು ಕಾರ್ಯಾಚರಣೆ ಮಾಡಲು ಯೋಜಿಸಲಾಗಿದೆ.
- ಕೆಲವು ಆಯ್ದ ಪ್ರಮುಖ ಮಾರ್ಗಗಳಲ್ಲಿ ಎಸಿ ಸ್ಲೀಪರ್ ಹಾಗೂ ನಾನ್ ಎಸಿ ಸ್ಲೀಪರ್ ವಾಹನಗಳನ್ನು ಕಾರ್ಯಾಚರಣೆ ಮಾಡಲು ಯೋಜಿಸಲಾಗಿದೆ.
- ವಿಭಾಗ ಮಟ್ಟದಲ್ಲಿ ಭೌತಿಕ ಮತ್ತು ಆರ್ಥಿಕ ಕಾರ್ಯಾಚರಣೆ ಕುರಿತಂತೆ ಶಾಖಾ ಮುಖ್ಯಸ್ಥರು ಹಾಗೂ ಘಟಕ ವ್ಯವಸ್ಥಾಪಕರನ್ನೊಳಗೊಂಡಂತೆ ವಾರಾಂತ್ಯ ಮತ್ತು ಮಾಸಾಂತ್ಯ ಸಭೆ ನಡೆಸಿ, ಸಾರಿಗೆ ಆದಾಯ ಉತ್ತಮ ಪಡಿಸಲು ಸಲಹೆಗಳನ್ನು/ನಿರ್ದೇಶನಗಳನ್ನು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.
- ವಿಭಾಗಗಳ ಅಧಿಕಾರಿಗಳು ಮೇಲಿಂದ ಮೇಲೆ ಘಟಕಗಳಿಗೆ ಭೇಟಿ ನೀಡಿ, ಕಡಿಮೆ ಆದಾಯ ಬರುವ ಅನುಸೂಚಿಗಳನ್ನು ಪರಿಶೀಲಿಸಿ, ಸದರಿ ಅನುಸೂಚಿಗಳ ಆದಾಯ ಹೆಚ್ಚಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
- ಖಾಲಿ ಇರುವ ಮಳಿಗೆಗಳಿಗೆ ಟೆಂಡರ್ ಪ್ರಕ್ರಿಯೆ ಸರಳೀಕರಣಗೊಳಿಸಿ ಆದಾಯ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಜಾಹೀರಾತು ಆದಾಯವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಶಾಲಾ-ಕಾಲೇಜು ಮತ್ತು ಕಾರ್ಖಾನೆಗಳ ಮುಖ್ಯಸ್ಥರಿಗೆ ಪತ್ರ ಬರೆದು ಚಾರ್ಟರ್ಡ್ ಸರ್ವಿಸ್ ಪಡೆದುಕೊಳ್ಳಲು ಕ್ರಮ ಜರುಗಿಸಲಾಗಿರುತ್ತದೆ.
- ನಿಗಮದ ತೆರೆದ ನಿವೇಶನಗಳಲ್ಲಿ ಬಾಡಿಗೆ ಆಧಾರದ ಮೇಲೆ ಇಂಧನ ಬಂಕ್ ಅಳವಡಿಸಿ ವಾಣಿಜ್ಯ ಆದಾಯ ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ತನಿಖಾ ತಂಡಗಳನ್ನು ನಿಯೋಜಿಸಿ ಪ್ರಯಾಣಿಕರು ಟಿಕೆಟ್ ಪಡೆದಿರುವ ಬಗ್ಗೆ ನಿಯಮಿತವಾಗಿ ತನಿಖೆ ನಡೆಸುವ ಮೂಲಕ ಪ್ರಯಾಣಿಕರಲ್ಲಿ ಜಾಗೃತಿ ಮೂಡಿಸಿ, ಟಿಕೆಟ್ ಪಡೆದುಕೊಂಡು ಪ್ರಯಾಣಿಸುವ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
- ನಿಗಮದ ಸಾರಿಗೆಗಳಲ್ಲಿ ಮುಂಗಡ ಆಸನಗಳನ್ನು ಗುಂಪಾಗಿ (ಅಂದರೆ ನಾಲ್ಕು ಜನ ಮತ್ತು ಅದಕ್ಕೆ ಮೇಲ್ಪಟ್ಟು) ಕಾಯ್ದಿರಿಸಿದಲ್ಲಿ ಶೇ.5ರಷ್ಟು ವಿಶೇಷ ರಿಯಾಯಿತಿಯನ್ನು ಕಲ್ಪಿಸಲಾಗಿದೆ ಹಾಗೂ ಮುಂಗಡ ಆಸನವನ್ನು ಹೋಗುವ ಮತ್ತು ಬರುವ (Onward/Return) ಒಮ್ಮೆಲೆ ಕಾಯ್ದಿರಿಸಿದಲ್ಲಿ ಬರುವ (Return) ಪ್ರಯಾಣಕ್ಕೆ ಶೇ.10ರಷ್ಟು ಪ್ರಯಾಣಿಕರನ್ನು ಆಕರ್ಷಿಸಲು ವಿಶೇಷ ರಿಯಾಯಿತಿಯನ್ನು ಕಲ್ಪಿಸಲಾಗಿದೆ.
- ಕೌಂಟರಗಳ ಮೂಲಕ ಮುಂಗಡ ಟಿಕೆಟ್ ಕಾಯ್ದಿರಿಸಿರುವ ಟಿಕೇಟ್ ಗಳಿಗೆ ಪ್ರಯಾಣವನ್ನು ಮುಂದೂಡುವ ಮತ್ತು ಹಿಂದೂಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
- ಪ್ರತಿಷ್ಠಿತ ಸಾರಿಗೆಗಳಲ್ಲಿ ಒಂಟಿಯಾಗಿ ಪ್ರಯಾಣ ಮಾಡುವ ಮಹಿಳೆಯರಿಗಾಗಿ, ಮಹಿಳೆಯರ ಪಕ್ಕದಲ್ಲಿ ಮಾತ್ರ ಕಾಯ್ದಿರಿಸಬಹುದಾದ ಆಸನಗಳ ವ್ಯವಸ್ಥೆ ಕಲ್ಪಿಸಲಾಗಿದೆ.
- ನಿಗಮದ ಸಾರಿಗೆಗಳಲ್ಲಿ ಮುಂಗಡ ಕಾಯ್ದಿರಿಸಿರುವ ಪ್ರಯಾಣಿಕರಿಗೆ ಪ್ರಯಾಣ ವೇಳೆ ಎರಡು ಗಂಟೆಯ ಮುಂಚಿತವಾಗಿ ನಗರ ಸಾರಿಗೆಗಳಿರುವ ನಗರಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.

Scanned with OKEN Scanner

# ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

ರಾಜ್ಯದಲ್ಲಿ ಸಾರಿಗೆ ಸೇವೆಗಳ ಬಲವರ್ಧನೆಗಾಗಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಕೈಗೊಂಡಿರುವ ಯೋಜನೆಗಳು ಈ ಕೆಳಗಿನಂತಿವೆ.

1. ನಗರ ಭೂಸಾರಿಗೆ ನಿರ್ದೇಶನಾಲಯದ 50% ಅನುದಾನದಿಂದ ಒಟ್ಟು ರೂ.42.95 ಕೋಟಿಗಳ ವೆಚ್ಚದಲ್ಲಿ 100 ಪೂರ್ಣ ಕವಚ ನಿರ್ಮಿತ ಡಿಸೇಲ್ ನಗರ ಸಾರಿಗೆ ಬಸ್ಸುಗಳನ್ನು ಖರೀದಿಸಲಾಗಿರುತ್ತದೆ.
2. ಇದಲ್ಲದೇ ಆಂತರಿಕ ಸಂಪನ್ಮೂಲಗಳಿಂದ ಹೊಸದಾಗಿ ಒಟ್ಟು 94 ಗ್ರಾಮಾಂತರ ಸಾರಿಗೆ, 36 ನಗರ ಸಾರಿಗೆ, 10 ನಾನ್ ಎ.ಸಿ ಸ್ಲೀಪರ್ ಮತ್ತು 02 ಮಲ್ಟಿ ಎಕ್ಸೆಲ್ ವೋಲ್ವೋ ಸ್ಲೀಪರ್ (ಅಂಬಾರಿ ಉತ್ಸವ) ವಾಹನಗಳನ್ನು ಖರೀದಿಸಲಾಗಿರುತ್ತದೆ.
3. ಸರ್ಕಾರದ ಅನುದಾನ ಮತ್ತು ಸಂಸ್ಥೆಯ ಆಂತರಿಕ ಸಂಪನ್ಮೂಲದಿಂದ 2023-24ನೇ ಸಾಲಿನಲ್ಲಿ ಒಟ್ಟು 296, 2024-25ನೇ ಸಾಲಿನಲ್ಲಿ ಒಟ್ಟು 560 ಹಾಗೂ 2025-26ನೇ ಸಾಲಿನಲ್ಲಿ ಇಲ್ಲಿಯವರೆಗೆ ಒಟ್ಟು 11 ಹೊಸ ವಾಹನಗಳನ್ನು ಒಟ್ಟಾರೆಯಾಗಿ 867 ಹೊಸ ವಾಹನಗಳನ್ನು ಖರೀದಿಸಲಾಗಿರುತ್ತದೆ.
4. ವಾಕರಸಾ ಸಂಸ್ಥೆಗೆ ಹಂಚಿಕೆಯಾಗಿರುವ ಒಟ್ಟು 700 ವಾಹನಗಳಲ್ಲಿ ಈಗಾಗಲೇ 300 ವಾಹನಗಳಿಗೆ ರೂ.123.53 ಕೋಟಿಗಳ ಅನುದಾನ ಬಿಡುಗಡೆಗೊಂಡಿರುತ್ತದೆ. ಅದರಂತೆ, ಟೆಂಡರ್ ಆಹ್ವಾನಿಸಲಾಗಿದ್ದು, ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಮುಂದುವರೆದು ಸರ್ಕಾರದ ಪತ್ರ ಸಂಖ್ಯೆ ಟಿಡಿ 33 ಟಿಸಿಬಿ 2025 ದಿನಾಂಕ 18.10.2025 ರಡಿಯಲ್ಲಿ ವಾಕರಸಾ ಸಂಸ್ಥೆಗೆ ಪ್ರಸಕ್ತ ಸಾಲಿನಲ್ಲಿ ಬಾಕಿ ಉಳಿದ 400 ಬಸ್ಸುಗಳ ಪೈಕಿ 150 ಬಸ್ಸುಗಳನ್ನು ಖರೀದಿಸಲು ಹಂಚಿಕೆ ಮಾಡಿ ಆಡಳಿತಾತ್ಮಕ ಅನುಮೋದನೆ ಪಡೆಯುವಂತೆ ಸೂಚಿಸಲಾಗಿರುತ್ತದೆ. ಅದರಂತೆ 150 ಪೂರ್ಣ ಕವಚ ನಿರ್ಮಿತ ಬಿ.ಎಸ್-6 ವಾಯವ್ಯ ಕರ್ನಾಟಕ ಸಾರಿಗೆ Moffussil ಬಸ್ಸುಗಳನ್ನು KTPP ಕಾಯ್ದೆ ಹಾಗೂ ನಿಯಮಗಳನ್ವಯ ಟೆಂಡರ್ ಆಹ್ವಾನಿಸಿ ಖರೀದಿಸಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ಹಾಗೂ ಅನುದಾನ ನೀಡುವಂತೆ ಸರ್ಕಾರಕ್ಕೆ ಪತ್ರ ಸಂಖ್ಯೆ 1719 ದಿನಾಂಕ 24.10.2025ರಡಿಯಲ್ಲಿ ಕೋರಲಾಗಿರುತ್ತದೆ.

- ಸರ್ಕಾರವು ಮಹಿಳಾ ಪ್ರಯಾಣಿಕರಿಗೆ ಉಚಿತ ಪ್ರಯಾಣ ನೀಡಲು ಶಕ್ತಿ ಯೋಜನೆ ಪ್ರಾರಂಭ ಮಾಡಿದ್ದು ದಿನಾಂಕ:-11-06-2023 ರಿಂದ ಪ್ರಾರಂಭವಾಗಿದ್ದು, ವಾ.ಕ.ರ.ಸಾ.ಸಂಸ್ಥೆಯಿಂದ ಶಕ್ತಿ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ.

**ಯೋಜನೆಯ ಪ್ರಮುಖ ಅಂಶಗಳು'**

1. ಕರ್ನಾಟಕ ರಾಜ್ಯದ ನಿವಾಸಿ ಮಹಿಳೆಯರಿಗೆ (ಲಿಂಗತ್ವ ಅಲ್ಪ ಸಂಖ್ಯಾತರು, ವಿದ್ಯಾರ್ಥಿನಿಯರು ಸೇರಿದಂತೆ) ಉಚಿತ ಪ್ರಯಾಣ ಸೌಲಭ್ಯ
2. ರಾಜ್ಯದ ನಾಲ್ಕೂ ಸಾರಿಗೆ ನಿಗಮಗಳ ನಗರ, ಸಾಮಾನ್ಯ ಹಾಗೂ ವೇಗದೂತ ಬಸ್ಸುಗಳಲ್ಲಿ ರಾಜ್ಯದೊಳಗೆ ಉಚಿತ ಪ್ರಯಾಣಕ್ಕೆ ಅವಕಾಶ. (ಅಂತರರಾಜ್ಯ ಸಾರಿಗೆಗಳ ಹಾಗೂ ಪ್ರತಿಷ್ಠಿತ ಸಾರಿಗೆಗಳನ್ನು ಹೊರತುಪಡಿಸಿ)
3. ಫಲಾನುಭವಿಗಳ ಗುರುತಿನ ಚೀಟಿಯನ್ನು ಪರಿಶೀಲಿಸಿ ಇಟಿಎಂ ಮುಖಾಂತರ ಶೂನ್ಯ ಟಿಕೇಟ್ ವಿತರಣೆ.
4. ಮುಂಗಡ ಬುಕಿಂಗ್ ಸೌಲಭ್ಯವಿರುವ ಬಸ್ಸುಗಳಲ್ಲಿ ಮುಂಗಡ ಆಸನ ಕಾಯ್ದಿರಿಸುವ ಸೌಲಭ್ಯ
5. ಯೋಜನೆ ವೆಚ್ಚವನ್ನು ಇಟಿಎಂಗಳಿಂದ ವಿತರಿಸಲಾದ ಶೂನ್ಯ ಟಿಕೇಟ್ ದತ್ತಾಂಶವನ್ನು ಆಧರಿಸಿ ನಿಗಮಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡಲಾಗುವುದು.

- ಈ ಯೋಜನೆಗೆ ವಾ.ಕ.ರ.ಸಾ.ಸಂಸ್ಥೆಯಲ್ಲಿ ಜೂನ್-2023 ರಿಂದ ನವೆಂಬರ್-2025 ರವರೆಗೆ ರೂ. 387524.81 ಲಕ್ಷ ವೆಚ್ಚವಾಗಿದ್ದು, ರೂ. 288713.73 ಲಕ್ಷ ಮೊತ್ತ ಸರ್ಕಾರದಿಂದ ಮರುಪಾವತಿಯಾಗಿರುತ್ತದೆ.
- ವಾ.ಕ.ರ.ಸಾ.ಸಂಸ್ಥೆಗೆ ಕಳೆದ ಮೂರು ವರ್ಷಗಳಿಂದ ಮಂಜೂರು ಮಾಡಿದ ಅನುದಾನದ ವಿವರ ಈ ಕೆಳಗಿನಂತಿರುತ್ತದೆ.

(ರೂ. ಲಕ್ಷಗಳಲ್ಲಿ)

| ವರ್ಷ | ಮಂಜೂರು | ಬಿಡುಗಡೆ |
|---|---|---|
| 2022-23 | 30450.50 | 30450.50 |
| 2023-24 | 42271.07 | 42271.07 |
| 2024-25 | 46188.86 | 46188.86 |
| 2025-26 (ನವೆಂಬರ್-25 ವರೆಗೆ) | 31096.62 | 14907.20 |

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

- ಮುಂಗಡವಾಗಿ ಸೀಟು ಕಾಯ್ದಿರಿಸುವ ಪ್ರಯಾಣಿಕರಿಗೆ ಅವರುಗಳು ಪ್ರಯಾಣ ಮಾಡುವ ವಾಹನ ಸಂಖ್ಯೆ, ನಿರ್ಗಮನದ ಸಮಯ ಹಾಗೂ ಸದರಿ ವಾಹನದಲ್ಲಿ ಕರ್ತವ್ಯ ನಿರ್ವಹಿಸುವ ಚಾಲನಾ ಸಿಬ್ಬಂದಿಯ ಮೊಬೈಲ್ ಸಂಖ್ಯೆಗಳನ್ನು ಎಸ್.ಎಮ್.ಎಸ್/ವಾಟ್ಸ್ಯಾಪ್ ಮೂಲಕ ಮಾಹಿತಿಯನ್ನು ಒದಗಿಸಲಾಗುತ್ತಿದೆ.
- ಪ್ರಯಾಣಿಕರ ಅನುಕೂಲಕ್ಕಾಗಿ ಆನ್ ಲೈನ್ ಅಥವಾ ಮೊಬೈಲ್ ಮೂಲಕ ಟಿಕೇಟ್ ಕಾಯ್ದಿರಿಸಿ, ಎಂ-ಟಿಕೇಟನ್ನು ಲ್ಯಾಪ್ ಟ್ಯಾಪ್/ಐಪ್ಯಾಡ್/ಟ್ಯಾಬ್ಲೆಟ್ ಅಥವಾ ಮೊಬೈಲ್ ಫೋನಲ್ಲಿ ತೋರಿಸಿ ಪ್ರಯಾಣಿಸಲು ಅನುವು ಮಾಡಿಕೊಡಲಾಗಿದೆ.
- ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ನಿಗಮದ ಪ್ರಮುಖ 60 ಬಸ್ ನಿಲ್ದಾಣಗಳಲ್ಲಿ ವಾಹನಗಳ ಸಂಖ್ಯೆ, ನಿರ್ಗಮನಗಳ ವೇಳೆ, ತಲುಪುವ ಸ್ಥಳ, ಮಾರ್ಗದ ಮಾಹಿತಿಯನ್ನು ಸಾರ್ವಜನಿಕ ಉದ್ಘೋಷಣಾ ವ್ಯವಸ್ಥೆಯ ಮುಖಾಂತರ ತಿಳಿಸಲಾಗುತ್ತಿದೆ.

ನಗರ ಭೂಸಾರಿಗೆ ನಿರ್ದೇಶನಾಲಯದ 50% ಅನುದಾನದಿಂದ ... 4 ... ಪೂರ್ಣ ಕವಚ ನಿರ್ಮಿತ ... ಒಟ್ಟು 94 ಗ್ರಾಮಾಂತರ ಸಾರಿಗೆ, 36 ನಗರ ಸಾರಿಗೆ, 10 ನಾನ್ ... ವಾಹನಗಳನ್ನು ... ಸಂಪನ್ಮೂಲದಿಂದ 2023-24ನೇ ಸಾಲಿನಲ್ಲಿ ಒಟ್ಟು 296, 2024-25ನೇ ಸಾಲಿನಲ್ಲಿ ಒಟ್ಟು 560 ಹಾಗೂ 2025-26ನೇ ಸಾಲಿನಲ್ಲಿ ಇಲ್ಲಿಯವರೆಗೆ ಒಟ್ಟು 11 ಹೊಸ ವಾಹನಗಳನ್ನು ಒಟ್ಟಾರೆಯಾಗಿ 867 ಹೊಸ ವಾಹನಗಳನ್ನು ಖರೀದಿಸಲಾಗಿರುತ್ತದೆ.

4. ವಾಕರಸಾ ಸಂಸ್ಥೆಗೆ ಹಂಚಿಕೆಯಾಗಿರುವ ಒಟ್ಟು 700 ವಾಹನಗಳಲ್ಲಿ ಈಗಾಗಲೇ 300 ವಾಹನಗಳಿಗೆ ರೂ.123.53 ಕೋಟಿಗಳ ಅನುದಾನ ಬಿಡುಗಡೆಗೊಂಡಿರುತ್ತದೆ. ಅದರಂತೆ, ಟೆಂಡರ್ ಆಹ್ವಾನಿಸಲಾಗಿದ್ದು, ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಮುಂದುವರೆದು ಸರ್ಕಾರದ ಪತ್ರ ಸಂಖ್ಯೆ ಟಿಡಿ 33 ಟಿಸಿಬಿ 2025 ದಿನಾಂಕ 18.10.2025 ರಡಿಯಲ್ಲಿ ವಾಕರಸಾ ಸಂಸ್ಥೆಗೆ ಪ್ರಸಕ್ತ ಸಾಲಿನಲ್ಲಿ ಬಾಕಿ ಉಳಿದ 400 ಬಸ್ಸುಗಳ ಪೈಕಿ 150 ಬಸ್ಸುಗಳನ್ನು ಖರೀದಿಸಲು ಹಂಚಿಕೆ ಮಾಡಿ ಆಡಳಿತಾತ್ಮಕ ಅನುಮೋದನೆ ಪಡೆಯುವಂತೆ ಸೂಚಿಸಲಾಗಿರುತ್ತದೆ. ಅದರಂತೆ 150 ಪೂರ್ಣ ಕವಚ ನಿರ್ಮಿತ ಬಿ.ಎಸ್-6 ವಾಯುವ್ಯ ಕರ್ನಾಟಕ ಸಾರಿಗೆ Moffussil ಬಸ್ಸುಗಳನ್ನು KTPP ಕಾಯ್ದೆ ನಿಯಮಗಳನ್ವಯ ಟೆಂಡರ್ ಆಹ್ವಾನಿಸಿ ಖರೀದಿಸಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ಹಾಗೂ ಅನುದಾನ ನೀಡುವಂತೆ ಸರ್ಕಾರಕ್ಕೆ ಪತ್ರ ಸಂಖ್ಯೆ 1719 ದಿನಾಂಕ 24.10.2025 ರಲ್ಲಿ ಕೋರಲಾಗಿರುತ್ತದೆ.

ಮುಖ್ಯ ಸಂಚಾರ ವ್ಯವಸ್ಥಾಪಕರು
ವಾ.ಕ.ರ.ಸಾ.ನಿ. ಕೇಂ.ಕ. ಹುಬ್ಬಳ್ಳಿ

- ಸರ್ಕಾರವು ಮಹಿಳಾ ಪ್ರಯಾಣಿಕರಿಗೆ ಉಚಿತ ಪ್ರಯಾಣ ನೀಡಲು ಶಕ್ತಿ ಯೋಜನೆ ಪ್ರಾರಂಭ ಮಾಡಿದ್ದು ದಿನಾಂಕ:-11-06-2023 ರಿಂದ ಪ್ರಾರಂಭವಾಗಿದ್ದು, ವಾ.ಕ.ರ.ಸಾ.ಸಂಸ್ಥೆಯಿಂದ ಶಕ್ತಿ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ.

**ಯೋಜನೆಯ ಪ್ರಮುಖ ಅಂಶಗಳು**

1. ಕರ್ನಾಟಕ ರಾಜ್ಯದ ನಿವಾಸಿ ಮಹಿಳೆಯರಿಗೆ (ಲಿಂಗತ್ವ ಅಲ್ಪ ಸಂಖ್ಯಾತರು, ವಿದ್ಯಾರ್ಥಿನಿಯರು ಸೇರಿದಂತೆ) ಉಚಿತ ಪ್ರಯಾಣ ಸೌಲಭ್ಯ
2. ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ನಗರ, ಸಾಮಾನ್ಯ ಹಾಗೂ ವೇಗದೂತ ಬಸ್ಸುಗಳಲ್ಲಿ ರಾಜ್ಯದೊಳಗೆ ಉಚಿತ ಪ್ರಯಾಣಕ್ಕೆ ಅವಕಾಶ. (ಅಂತರರಾಜ್ಯ ಸಾರಿಗೆಗಳ ಹಾಗೂ ಪ್ರತಿಷ್ಠಿತ ಸಾರಿಗೆಗಳನ್ನು ಹೊರತುಪಡಿಸಿ)
3. ಫಲಾನುಭವಿಗಳ ಗುರುತಿನ ಚೀಟಿಯನ್ನು ಪರಿಶೀಲಿಸಿ ಇಟಿಎಂ ಮುಖಾಂತರ ಶೂನ್ಯ ಟಿಕೇಟ್ ವಿತರಣೆ.
4. ಮುಂಗಡ ಬುಕಿಂಗ್ ಸೌಲಭ್ಯವಿರುವ ಬಸ್ಸುಗಳಲ್ಲಿ ಮುಂಗಡ ಆಸನ ಕಾಯ್ದಿರಿಸುವ ಸೌಲಭ್ಯ
5. ಯೋಜನೆ ವೆಚ್ಚವನ್ನು ಇಟಿಎಂಗಳಿಂದ ವಿತರಿಸಲಾದ ಶೂನ್ಯ ಟಿಕೇಟ್ ದತ್ತಾಂಶವನ್ನು ಆಧರಿಸಿ ನಿಗಮಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡಲಾಗುವುದು.

- ಈ ಯೋಜನೆಗೆ ವಾ.ಕ.ರ.ಸಾ.ಸಂಸ್ಥೆಯಲ್ಲಿ ಜೂನ್-2023 ರಿಂದ ನವೆಂಬರ್-2025 ರವರೆಗೆ ರೂ. 387524.81 ಲಕ್ಷ ವೆಚ್ಚವಾಗಿದ್ದು, ರೂ. 288713.73 ಲಕ್ಷ ಮೊತ್ತ ಸರ್ಕಾರದಿಂದ ಮರುಪಾವತಿಯಾಗಿರುತ್ತದೆ.
- ವಾ.ಕ.ರ.ಸಾ.ಸಂಸ್ಥೆಗೆ ಕಳೆದ ಮೂರು ವರ್ಷಗಳಿಂದ ಮಂಜೂರು ಮಾಡಿದ ಅನುದಾನದ ವಿವರ ಈ ಕೆಳಗಿನಂತಿರುತ್ತದೆ.

(ರೂ. ಲಕ್ಷಗಳಲ್ಲಿ)

| ವರ್ಷ | ಮಂಜೂರು | ಬಿಡುಗಡೆ |
|---|---|---|
| 2022-23 | 30450.50 | 30450.50 |
| 2023-24 | 42271.07 | 42271.07 |
| 2024-25 | 46188.86 | 46188.86 |
| 2025-26 (ನವೆಂಬರ್-25 ವರೆಗೆ) | 31096.62 | 14907.20 |



Scanned with OKEN Scanner